


ಯಾವುದೇ ಮಹತ್ವದ ಸಂಗತಿಯ ನೆನಪು ಕೇವಲ ಸಂಭ್ರಮದಲ್ಲಷ್ಟೇ ಕೊನೆಗೊಳ್ಳದೆ, ಅರ್ಥಪೂರ್ಣ ಅವಲೋಕನವಾಗಿ ಪರಿಣಮಿಸಬೇಕು. ಆ ಅವಲೋಕನ ನಡೆದುಬಂದ ದಾರಿಯನ್ನು ನೆನಪಿಸುವುದರ ಜೊತೆಗೆ, ನಡೆಯಬೇಕಾದ ದಾರಿಯತ್ತ ಕಣ್ಣು ಹೊರಳಿಸಲು ಪ್ರೇರಣೆಯಾಗಬೇಕು. ಇಂಥದೊಂದು ಸ್ಫೂರ್ತಿದಾಯಕ ಸಂದರ್ಭ, ಕನ್ನಡನಾಡಿಗೆ ಕರ್ನಾಟಕವೆಂದು ನಾಮಕರಣವಾಗಿ ಐವತ್ತು ವರ್ಷ ತುಂಬಿರುವುದು. 1973ರ ನವೆಂಬರ್ 1ರಂದು ಕನ್ನಡನಾಡು ಕರ್ನಾಟಕವೆಂದು ಕರೆಸಿಕೊಂಡಿತು. ಆ ಐತಿಹಾಸಿಕ ನಾಮಕರಣ ಪ್ರಕ್ರಿಯೆಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಿ, ಕಳೆದ ಅರ್ಧ ಶತಮಾನದ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಕರ್ನಾಟಕ ಕಂಡ ಪ್ರಮುಖ ಬೆಳವಣಿಗೆಗಳ ಕುರಿತ ಅವಲೋಕನ ಇಲ್ಲಿದೆ. ವಿವಿಧ ಕ್ಷೇತ್ರಗಳಲ್ಲಿ ಗುರ್ತಿಸಿಕೊಂಡವರು, ಕನ್ನಡ-ಕರ್ನಾಟಕದ ಬಹುಮುಖಿ ಬೆಳವಣಿಗೆಗಳನ್ನು ಗುರ್ತಿಸುವ  ಪ್ರಯತ್ನ ನಡೆಸಿದ್ದಾರೆ. ಈ ಕಿರು ಟಿಪ್ಪಣಿಗಳು ನಾಡು-ನುಡಿಯ ಬಗ್ಗೆ ಹೆಮ್ಮೆ ಮೂಡಿಸುವಂತಿವೆ; ಕನ್ನಡ ವಿವೇಕದ ಅನನ್ಯತೆಯತ್ತ ಗಮನಸೆಳೆಯುವಂತಿವೆ ಹಾಗೂ ನಾಳೆಗಳನ್ನು ಎಚ್ಚರದಿಂದ ರೂಪಿಸಿಕೊಳ್ಳಬೇಕಾದ ಅಗತ್ಯವಾದ ನೋಟ-ಸಾಧ್ಯತೆಗಳನ್ನು ನಮಗೆ ನೀಡುವಂತಿವೆ.